ಮುಂಗಟ್ಟುಗಳು ಬಾಗಿಲು ಹಾಕಿದ್ದವು. ಅಲ್ಲೊಂದು ಇಲ್ಲೊಂದು ಕಾರು, ಬಸ್ಸು, ಬೈಕುಗಳು ಓಡಾಡುತ್ತಿದ್ದವು.

ಬೆಳಿಗ್ಗೆ ಕಾರ್ಖಾನೆಗೆ ಬರುವಾಗ ದಿನನಿತ್ಯ ತಿಂಡಿ ತಿನ್ನುತ್ತಿದ್ದ ಹೋಟೆಲಿನಲ್ಲಿ ಇಡ್ಲಿವಡೆ ತಿಂದು ಬಂದಿದ್ದೆ. ಮಧ್ಯಾಹ್ನ ಕೆಲಸದ ಭರದಲ್ಲಿ ಊಟದ ನೆನಪು ಬಂದಿರಲಿಲ್ಲ. ಮೊದಲು ಕೆಟ್ಟು ಹೋಗಿದ್ದ ಯಂತ್ರ ರಿಪೇರಿಯದೇ ಆತಂಕವಾಗಿತ್ತು. ನಮ್ಮ ಕಾರ್ಖಾನೆಯ ಮಾಲೀಕ ಅತೀ ಸಿಡುಕಿನ ಮತ್ತು ಶಿಸ್ತಿನ ವ್ಯಕ್ತಿ. ಶ್ರಮ ಮತ್ತು ಶ್ರದ್ಧೆಯಿಂದ ಕೆಲಸ ಮಾಡದ ನೌಕರರನ್ನು ಮುಲಾಜಿಲ್ಲದೆ ಕೆಲಸದಿಂದ ಕಿತ್ತು ಹಾಕುತ್ತಿದ್ದ. ಹಾಗೆ ಕಿತ್ತು ಹಾಕಿದ ನಂತರ ಕೈಕಾಲು ಹಿಡಿದರೂ ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ. ವಜಾಗೊಂಡ ನೌಕರರ ಸ್ಥಾನಕ್ಕೆ ಬೇರೆ ಯಾರೂ ತಕ್ಷಣಕ್ಕೆ ಸಿಗದಿದ್ದರೆ ಅವರ ಕೆಲಸವನ್ನು ಅವನೇ ಮಾಡುತ್ತಿದ್ದ. ಮೂರು ತಿಂಗಳ ಹಿಂದೆ ನಮ್ಮ ಕಾರ್ಖಾನೆಯ ಸೆಕ್ಯೂರಿಟಿ ಗಾರ್ಡ್ ನಮ್ಮ ಮಾಲೀಕನ ಕಾರು ಬಂದಾಗ ಗೇಟು ತೆರೆಯದೇ ಬೇರೆಲ್ಲಿಯೋ ಹೋಗಿದ್ದರಿಂದ ಅವನು ಆ ಕ್ಷಣದಲ್ಲಿಯೇ ಕೆಲಸದಿಂದ ವಜಾಗೊಂಡಿದ್ದ. ಮತ್ತೊಬ್ಬ ಹೊಸ ಸೆಕ್ಯೂರಿಟಿ ಗಾರ್ಡ್ ನೇಮಕಗೊಳ್ಳುವವರಗೆ ನಮ್ಮ ಮಾಲೀಕನೇ ಕಾರ್ಖಾನೆಯ ಪ್ರವೇಶ ದ್ವಾರದಲ್ಲಿ ಕುಳಿತು ಸೆಕ್ಯೂರಿಟಿ ಗಾರ್ಡಿನ ಕೆಲಸವನ್ನು ನಿರ್ವಹಿಸಿದ್ದ. ಅದನ್ನು ಕಣ್ಣಾರೆ ಕಂಡ ನಾನು ಕೆಲಸ ಹೋದರೆ ಹೊಟ್ಟೆಪಾಡಿನ ಗತಿಯೇನು ಎಂದು ಭೀತನಾಗಿ ಅತೀವ ಶ್ರಮವಹಿಸಿ ಕೆಲಸ ಮಾಡುವುದನ್ನು ರೂಢಿಸಿಕೊಂಡಿದ್ದೆ.

ಸುತ್ತಮುತ್ತ ಗಮನಿಸುತ್ತ ರಸ್ತೆಯಲ್ಲಿ ಬೈಕನ್ನು ನಿಧಾನವಾಗಿ ಓಡಿಸತೊಡಗಿದೆ. ಅಲ್ಲೊಂದು ಕಡೆ ಸಿಟಿ ಬಸ್ ನಿಲ್ದಾಣದ ಸಮೀಪ ನೈಟ್ ಕ್ಯಾಂಟೀನ್ ಎಂದು ಬೋರ್ಡು ಹಾಕಿಕೊಂಡ ತಳ್ಳುವ ಗಾಡಿಯ ಬಳಿ ನಾಲ್ಕಾರು ಜನರು ನಿಂತು ತಿಂಡಿ ತಿನ್ನುತ್ತಿದ್ದುದು ಕಾಣಿಸಿ ಬೈಕನ್ನು ಅತ್ತ ನಡೆಸಿದೆ. ಬೈಕು ನಿಲ್ಲಿಸಿ ಗಾಡಿಯ ಬಳಿ ತೆರಳಿದೆ. ಗಾಡಿಯ ಒಳಗೆ ಇಳಿಬಿಟ್ಟಿದ್ದ ಬ್ಯಾಟರಿ ಚಾಲಿತ ಸಿಎಫ್ಎಲ್ ದೀಪದ ಬೆಳಕಲ್ಲಿ ದೊಡ್ಡ ಅಲ್ಯೂಮಿನಿಯಂ ಪಾತ್ರೆಯ ತಳದಲ್ಲಿ ತುಂಬಿದ್ದ ಇಡ್ಲಿಗಳು ಕಾಣಿಸಿ ಬಾಯಿಯಲ್ಲಿ ನೀರೂರಿತು. ಹಳತಾಗಿದ್ದ ಸ್ಟೀಲ್ ತಟ್ಟೆಯ ಮೇಲೆ ಬಾಳೆ ಎಲೆಯ ಚೂರು ಹಾಕಿ ಗಾಡಿಯವನು ನೀಡಿದ ಇಡ್ಲಿ ಚಟ್ನಿಯನ್ನು ಹೊಟ್ಟೆ ತುಂಬಾ ತಿಂದಾಗ ನನ್ನ ಹಸಿವು ನೀಗಿ ನಿರಾಳವಾಯಿತು. ಪಕ್ಕದಲ್ಲಿದ್ದ ನೀರಿನ ಕ್ಯಾನಿನಿಂದ ಒಂದು ಲೋಟ ನೀರು ಹಿಡಿದು ಕುಡಿದು, ಹಣ ನೀಡಿ ಬೈಕು ಹತ್ತಿ ನನ್ನ ರೂಮಿನ ಕಡೆ ಹೊರಟೆ. ಸದ್ಯ ಈ ಮಹಾನಗರದಲ್ಲಿ ಜೇಬಿನಲ್ಲಿರುವ ಹಣಕ್ಕೆ ತಕ್ಕನಾಗಿ ಎಲ್ಲಿಯಾದರೂ ಹೊಟ್ಟೆ ತುಂಬಿಸಿಕೊಳ್ಳಬಹುದಾದ ವ್ಯವಸ್ಥೆಯಂತೂ ಇದೆಯಲ್ಲಾ ಎಂದುಕೊಂಡು ಸಮಾಧಾನವಾಯಿತು.

ಹೊಟ್ಟೆ ತುಂಬಿತ್ತು. ಒಂದು ಸಿಗರೇಟು ಸೇದೋಣವೆನ್ನಿಸಿತು. ರಸ್ತೆಯ ಪಕ್ಕದಲ್ಲಿದ್ದ ಗೂಡಂಗಡಿಯೊಂದರ ಬಳಿ ಬೈಕು ನಿಲ್ಲಿಸಿ ಸಿಗರೇಟೊಂದನ್ನು ಕೊಂಡು ಇನ್ನೇನು ಬಾಯಿಗಿಟ್ಟು ಹಚ್ಚಿಕೊಳ್ಳಬೇಕೆನ್ನಿಸುವಷ್ಟರಲ್ಲಿ ನೈಟ್ ಬೀಟಿನ ಇನ್‌ಸ್ಪೆಕ್ಟರ್ ಬೈಕಿನ ಹಿಂದೆ ಕಾನ್‌ಸ್ಟೆಬಲ್‌ನನ್ನು ಕೂರಿಸಿಕೊಂಡು ಬಂದು ಗೂಡಂಗಡಿಯ ಬಳಿ ನಿಲ್ಲಿಸಿದ. ಸಿಗರೇಟು ಸೇದಲು ಭಯವಾಯಿತು. ಹಿಂದೊಮ್ಮೆ ರಸ್ತೆಯಲ್ಲಿ ನಿಂತು ಸಿಗರೇಟು ಸೇದಿ ಹತ್ತಿರದಲ್ಲಿ ಶಾಲೆಯಿದೆ ಎಂಬ ಕಾರಣದಿಂದ ಇನ್ನೂರು ರೂಪಾಯಿ ದಂಡ ಕಟ್ಟಿದ್ದು ನೆನಪಿಗೆ ಬಂದು ಸಿಗರೇಟು ಜೇಬಿನಲ್ಲಿಟ್ಟುಕೊಂಡು ಬೈಕು ಹತ್ತಿದೆ. ಒಂದರ್ಧ ಕಿಲೋಮೀಟರು ಬಂದ ನಂತರ ತಿರುವಿನಲ್ಲಿದ್ದ ಬೀದಿ ದೀಪದಿಂದ ಸ್ವಲ್ಪ ದೂರದಲ್ಲಿ ಬೈಕು ನಿಲ್ಲಿಸಿ ಫುಟ್‌ಪಾತಿನ ಮೇಲೆ ನಿಂತು ಸಿಗರೇಟು ಹಚ್ಚಿ ಸೇದತೊಡಗಿದೆ.